ಸರಿ ನೋಡುತ್ತಿಲ್ಲವೆಂದು ಅಪ್ಪನ ಹತ್ತಿರ ಮುದುಕಿ ದೂರು ಹೇಳತೊಡಗಿದಳು. ಡಾಕ್ಟರರು ಬರೆದುಕೊಟ್ಟ ಗುಳಿಗೆಯ ಚೀಟಿಯನ್ನು ಹರಿದುಹಾಕಿ ದೊಡ್ಡಪ್ಪನೇ ಡಾಕ್ಟರರ ತರಹ ಗೀಚುಗೀಚಾಗಿ ಬರೆದು ಯಾವುದೋ ಕಡಿಮೆ ದುಡ್ಡಿನ ಮಾತ್ರೆ ತರುತ್ತಾನೆಂದೂ ಹೇಳುವಳು. ತನ್ನನ್ನು ಬೇಗ ಸುಡುಗಾಡಿಗೆ ಅಟ್ಟಲಿಕ್ಕೆ ಕಾಯುತ್ತಿದ್ದಾನೆಂದು ಅವನಿಗೆ ಶಾಪ ಹಾಕುವಳು. ತಾನು ಸುಮ್ಮನೆ ಬಿಟ್ಟೇನೆಯೇ? ತನಗೆಂದು ತಂದಿರುವ ಗುಳಿಗೆಗಳನ್ನು ಸಣ್ಣಗೆ ಪುಡಿ ಮಾಡಿ ಮರಳಿ ಆತನ ಸುಣ್ಣದ ಡಬ್ಬಿಗೆ ತುಂಬಿದ್ದೇನೆಂದು ಆಕೆ ಹೇಳಿದಾಗ ನಮಗೆ ಅಳಬೇಕೋ ನಗಬೇಕೋ ತಿಳಿಯಲಿಲ್ಲ.

ಪರಿಚಿತರನ್ನೂ ಸಂಬಂಧಿಕರನ್ನೂ ಅವರು ಯಾವುದೇ ದಿಗ್‌ದಿಗಂತ, ದ್ವೀಪದಲ್ಲಿದ್ದರೂ ಹುಡುಕಿಕೊಂಡು ಹೋಗಿ ದೊಡ್ಡಪ್ಪ ಆಹ್ವಾನಿಸಿದ್ದ. ಮದುವೆ ಮನೆಗೆ ಜನ ಬಂದು ಸೇರತೊಡಗಿದರು. ನಾವೆಂದೂ ಯೋಚಿಸಿರದ, ನಾವು ಕನಸಿನಲ್ಲಿಯೂ ನೋಡಿರದ ವ್ಯಕ್ತಿಗಳು ಈಗ ನಮ್ಮ ಸಂಬಂಧಿಕರಾಗಿ ನಮ್ಮೆದುರು ನಿಂತಿದ್ದರು. ಬೇರೆ ಬೇರೆ ಊರುಗಳಿಂದ ಬಂದವರ ಮತ್ತು ಇಲ್ಲಿಯವರ ಸಂಬಂಧದ ವಾಚಕಗಳನ್ನು ಕೆಲವರು ನನಗೆ ವಿವರಿಸತೊಡಗಿದರು. 'ಅಜ್ಜನ ಕಾಕಾಗ ಆಂವ ಅಳ್ಯಾ ಆಗಬೇಕು', 'ಈಕಿ ನಿಮ್ಮ ತಾಯಿಯ ಸ್ವಾದರಮಾಂವನ ಎರಡನೇ ಅಳ್ಯಾನ ಹೇಂತಿ', 'ಆಗಳೇ ನಿನಗ 'ಮದ್ವಿ ಆಗ್ತಿಯೇನು' ಅಂತ ಕೇಳಿದಳಲ್ಲ, ಆ ಮುದುಕಿ, ಆಕಿ ನಿಮ್ಮ ಅಪ್ಪಗ ದೊಡವ್ವ ಆಗಬೇಕು!', 'ನಿಮ್ಮ ಅಕ್ಕ ಅದಾಳಲ್ಲ, ಆಕಿ ಅತ್ತಿಯ ಮೈದುನನ ಮಗಗ ನಮ್ಮ ಊರಿನ ಕನ್ಯೆ ಕೊಟ್ಟೇತಿ...' ಓಹೋ! ನನ್ನ ತಲೆ ತಿರುಗುತ್ತಿತ್ತು. ತಲೆತಲಾಂತರದಲ್ಲಿ ಆಗಿಹೋಗಿರುವ ಕವಲು–ಕೂಡುವಿಕೆಗಳನ್ನು ನೆನಪಿಡುವುದು ನನಗೆ ಕಷ್ಟವಾಯಿತು. ಸಂಬಂಧಿಕರೆನ್ನಿಸಿಕೊಂಡು ಮನೆಗೆ ಬಂದಿರುವವರ ರೂಪ–ಆಕಾರಗಳು ಮಜಮಜವಾಗಿದ್ದವು. ಅವರ ಎತ್ತರ, ಮೈಕಟ್ಟು, ಮೂಗು, ಕಣ್ಣು, ಹುಬ್ಬು, ನಡಿಗೆಗಳನ್ನು ನೋಡುವುದು ನಮಗೆ ಒಂದು ರೀತಿಯ ಖುಶಿಯೆನಿಸಿತು. ವ್ಯಕ್ತಿಗಳನ್ನು ಈ ರೀತಿ ಕಣ್ಣಲ್ಲಿ ಕಣ್ಣಿಟ್ಟು ನೋಡುವುದನ್ನು ನಾವು ಮಾಡಿರಲಿಲ್ಲ. ಅವರ ಜೊತೆ ಜಾಸ್ತಿ ಹೊತ್ತು ಬೆರೆಯುವುದಾಗಲಿ, ಅವರ ಮನೆಯಲ್ಲಿ ಏನಾದರೂ ತಿನ್ನುವುದಾಗಲಿ ಮಾಡಬಾರದೆಂದು ಅವ್ವ ನಮ್ಮನ್ನು ದೇವರ ಜಗಲಿಗೆ ಕರೆದುಕೊಂಡು ಹೋಗಿ ಆಣೆ ಮಾಡಿಸಿದಳು. 'ಹಿಂದ ಪಾಂಡವರನ್ನ ಕೌರವರು ಹೆಂಗ ಕಾಡಿದರು ಗೊತ್ತೈತಿಲ್ಲೋ? ಉಂಡಿಯೊಳಗ ವಿಷ ಹಾಕಿ ತಿನ್ನಸತಿದ್ರು. ಇನ್ನೊಂದು ಸ್ವಲ್ಪ ತಡಾ ಆಗಿದ್ರ ಅರಗಿನ ಮನ್ಯಾಗ ಅವರು ಬೂದಿಯಾಗಿ ಹೋಗ್ತಿದ್ರು...' ಅಕ್ಕನ ಮಗಳು ಒಂಬೊತ್ತು ವರ್ಷದ ಪಲ್ಲವಿ ತಾನು ಮಹಾ ಜಾಣೆ ಎನ್ನುವ ರೀತಿಯಲ್ಲಿ ಅಜ್ಜಿ ಅವಳಿಗೆ ಹೇಳಿದ್ದ ಕತೆಯನ್ನು ನೆನಪಿಸುವಳು. ಅವ್ವ ಹಿರಿಹಿರಿ ಹಿಗ್ಗಿ 'ಅಯ್ಯ, ನನ್ನ ಬಂಗಾರ, ಎಷ್ಟು ಚೆಂದ ನೆನಪಿಟ್ಟಕೊಂಡೇತಿ ಇದು ನನ್ನ ಕೂಸು' ಅಂತ ಬರಸೆಳೆದು ಅದಕ್ಕೆ ಲೊಚಲೊಚ ಮುತ್ತು ಕೊಡುವಳು.

ಏನಾದರೊಂದು ವಿಲಕ್ಷಣ ಹೆಸರು ಕೊಡುವುದಕ್ಕೆ ಪಲ್ಲವಿ ನಮ್ಮ ಓಣಿಯಲ್ಲಿ ಮತ್ತು ಸಂಬಂಧಿಕರಲ್ಲಿ ಫೇಮಸ್ ಆಗಿದ್ದಳು. ಕೆಲವರಿಗೆ ಅವಳು ಒಂಟೆ, ಇಲಿ, ಮುಸ್ಯಾ, ಹದ್ದು ಎಂತೆಲ್ಲ ಕೊಟ್ಟಿದ್ದಳು. ತನ್ನ ಕ್ಲಾಸ್ ಟೀಚರ್‌ಗೆ ಗಿಣಿ ಎಂದು ನಾಮಕರಣ ಮಾಡಿದ್ದಳು. 'ಇವತ್ತು ಗಿಣಿ ಬಾಳ ಹೋಮ್‌ವರ್ಕ್ ಕೊಟ್ಟೇತಿ' – ತನ್ನ ಮಮ್ಮಿಗೆ ಕೇಳಿಸದಂತೆ ನನಗಷ್ಟೇ ಹೇಳುವಳು. ಒಮ್ಮೊಮ್ಮೆ ಅವಳ ಮಾತಿನ ತಲೆಬುಡ ತಿಳಿಯುತ್ತಿರಲಿಲ್ಲ. ಒಂದು ಸಲ ಸ್ಕೂಲಿಗೆ ಹೋದಾಗ ಟೀಚರ್ ಮೂಗು ಗಿಣಿಮೂಗಿನ ತರಹ ಇದ್ದದ್ದನ್ನು ಕಂಡು ವಿಸ್ಮಯಪಟ್ಟಿದ್ದೆ. ಮದುಮಗನಿಗೆ ಟೊಣಪ್ಯಾ ಎಂದ ಅವಳು ಮದುಮಗಳಿಗೆ ಗುಳ್ಳವ್ವ ಎಂದು ಕರೆದಳು. ಮುದುಕಿಗೆ ಏನು ಹೆಸರು ಕೊಡಬಹುದೆಂದು ಬಹಳಷ್ಟು ಮಂದಿ ಉದ್ವೇಗದಲ್ಲಿದ್ದಂತೆ ಇದ್ದರು: 'ಆಕಿಗೀ ಬ್ಯಾರೆ ಹೆಸರು ಏನು ಕೊಡೋದು? ಅವಳನ್ನ ನೋಡಿದ್ರ ಗೊತ್ತಾಗೂದುಲ್ಲನ? ಆಕಿ ಗೂಬೆ. ವಯಸ್ಸಾಗಿದ್ರೂ ಆಕಿ ಕಣ್ಣು, ಕಿವಿ ಎಷ್ಟು ಚುರುಕ ಅದಾವು. ಸದ್ದಿಲ್ಲದಂಗ ಆಕಿ ಮಂದಿ ಮ್ಯಾಲ ಎರಗ್ತಾಳ... ಬಂದ ಎರಡು ದಿನದೊಳಗ ಅಜ್ಜನ ಕಡಿಯಿಂದ ಬಂಗಾರ ಎಗರಿಸಿಬಿಟ್ಲು...'

ಪಲ್ಲವಿಯ ಮಾತಿನಿಂದ ನಮಗೆಲ್ಲರಿಗೂ ತುಂಬ ಆಶ್ಚರ್ಯವಾಯಿತು. ನಮಗದು ತಿಳಿದಿರಲಿಲ್ಲ. ಅವ್ವ ಮತ್ತು ನಾನು ಆಮೇಲೆ ಗಮನಿಸಿದೆವು. ಅದನ್ನು ಗಮನಿಸಿದ್ದ ಕೆಲವರು ಆಮೇಲೆ ಹೇಳಿದರು. ಅಪ್ಪನ ಕೊರಳಲ್ಲಿದ್ದ ಚೈನು ಹಾಗೂ ಬೆರಳಲ್ಲಿದ್ದ ಉಂಗುರ ಇರಲಿಲ್ಲ. ಕೇಳಿದರೆ ಅವನು ಹಾರಿಕೆಯ ಉತ್ತರ ಕೊಟ್ಟ. ಹಿಂದೆ ಅವಳು ಅಡವು ಇಟ್ಟುಕೊಳ್ಳುತ್ತಿದ್ದ ಕಾಲದಲ್ಲಿ ಅವಳಿಗೆ ಕೊಡಬೇಕಾದುದು ಬಾಕಿಯಿತ್ತಂತೆ. ಆಕಿ ಕಾಟ ಜಾಸ್ತಿಯಾಗಿತ್ತು... ಅದಕ್ಕ ಕೊಟ್ಟಬಿಟ್ಟೆ... ಅಜ್ಜಿಯೊಡನೆ ಬಂದಿದ್ದ ಅವಳ ಸೊಸೆಯೊಬ್ಬಳು ಆ ಚೈನನ್ನು ಹಾಕಿಕೊಂಡು ಮೆರೆಯುತ್ತಿದ್ದಳು. ಅವ್ವ ಮನೆಗೆ ಬಂದು ಬೋರಾಡಿ ಅಳುತ್ತಿದ್ದಳು: ನನಗ ಯಾವಾಗ್ಲೊ ಸಂಶಯ ಬಂದಿತ್ತು. ಆವಾಗ ಹಿಂದ ನಾ ಜಗಳಾಡಿ ತವರಮನಿಗೆ ಹೋದಾಗ ಇವರಿಗೆ ಆ ಮುದುಕಿ ಮತ್ತೊಂದು ಮದುವಿ ಮಾಡಿದ್ಲಂತ. ಮಂದಿ ಹೇಳತಿದ್ದರು. ನಾ ನಂಬಿರಲಿಲ್ಲ. ಓಹೋ! ಹಾಗಾದರೆ ಮುದುಕಿಯ ಜೊತೆ ಅವಳ ಸಹಾಯಕ್ಕೆಂದು ಬಂದವಳು ಅಪ್ಪನ ಇನ್ನೊಬ್ಬ ಹೆಂಡತಿ! ಅಪ್ಪ ಎಷ್ಟೊಂದು ಮುಗ್ಧ, ಎಷ್ಟೊಂದು ಸಂಭಾವಿತ ಎಂದು ಹೊಗಳಿಸಿಕೊಂಡಿದ್ದಾನೆ. ಅವನು ಹಾಗಿರಲು ಸಾಧ್ಯವಿಲ್ಲ, ಇದು ಸುಮ್ಮನೆ ಮಂದಿ ಆಡಿಕೊಳ್ಳುವ ಮಾತು ಎಂದು ನಮಗೆ ನಾವು ಸಮಾಧಾನ ಮಾಡಿಕೊಳ್ಳುತ್ತಿದ್ದೆವು. ಹಾಗಿದ್ದರೆ ಮದುವೆ ಮನೆಯಲ್ಲಿ ಅಪ್ಪ ಅವಳ ಜೊತೆಯೇ ಯಾಕೆ ಜಾಸ್ತಿ ಹೊತ್ತು ಮಾತಾಡುತ್ತಿದ್ದ? ಅಷ್ಟೆಲ್ಲ ಕೆಲಸ ಮಾಡುವ ಹುಡುಗರಿದ್ದರೂ ಅವಳನ್ನು ಕರೆದು ಯಾಕೆ ಕೆಲಸ ಹೇಳುತ್ತಿದ್ದ? ಸಂಬಂಧಿಕರಿಗೆ ಬಟ್ಟೆ ತರುವುದಿದೆಯೆಂದು ಅವಳನ್ನು ಕರೆದುಕೊಂಡು ಯಾಕೆ ಜೀಪ್‌ನಲ್ಲಿ ಹೋದ? ತೇರದಾಳಕ್ಕೆ ಹೋಗುವ ಸಾಮಾನುಗಳೆಂದು ಒಂದೆರಡು ಚೀಲಗಳನ್ನು ಹೊರಗೆ ಸಾಗಿಸಿದ್ದು ಯಾಕೆ? ಅವ್ವ ಕೇಳುತ್ತಿದ್ದಳು. ನಾವು ನಿಸ್ಸಹಾಯಕರಾಗುತ್ತಿದ್ದೆವು. ಏನೂ ಮಾತಾಡದೆ ಎದ್ದು ಹೋಗಿದ್ದ ಅಪ್ಪ ದೊಡ್ಡಪ್ಪನ ಮನೆಯಲ್ಲಿಯೇ ಕುಳಿತಿದ್ದ.

ಅಪ್ಪನ ಬದುಕಿನಲ್ಲಿ ಈ ರೀತಿಯ ಘಟನೆಯಿತ್ತೆನ್ನುವುದೂ ಅದನ್ನಾತ ಇಷ್ಟೊಂದು ರಹಸ್ಯವಾಗಿ ಇಟ್ಟಿದ್ದನೆಂಬುದೂ ನಮಗೆಲ್ಲ ದೊಡ್ಡ ಆಘಾತದ ವಿಷಯವಾಗಿತ್ತು. ಅವ್ವನಿಗೆ ಹೇಗೆ, ಯಾವ ರೀತಿಯಲ್ಲಿ ಸಮಾಧಾನ ಮಾಡಬೇಕೆಂಬುದು ಹೊಳೆಯದೆ ಸುಮ್ಮನೆ ಕುಳಿತಿದ್ದೆ. ಅಕ್ಕ ಕಣ್ಣೀರುಗರೆಯುತ್ತ ತಾಯಿಯನ್ನು ಸಮಾಧಾನಪಡಿಸುತ್ತಿದ್ದಳು. ಅಪ್ಪ ರಾತ್ರಿಯಾದರೂ ಬರಲಿಲ್ಲ. ಮರುದಿನವೂ ಬರಲಿಲ್ಲ. ದೊಡ್ಡಪ್ಪನ ಮನೆಯೆಂದರೆ ಅದೊಂದು ಬೆಂಕಿಯ ಬಲೆ ಎಂದು ಹೇಳುತ್ತಿದ್ದ ಅವನೇ ಈಗ ಅದರಿಂದ ಹೊರಬಾರದಂತೆ ಕುಳಿತಿದ್ದು ಕಂಡು ನಮಗೆ ಅವಮಾನ ಅನಿಸತೊಡಗಿತ್ತು. ಮುದುಕಿಯನ್ನು ದ್ವೇಷ ಮಾಡುತ್ತಿದ್ದ ದೊಡ್ಡಪ್ಪನ ಮನೆಯವರು ಈಗ ಅವಳನ್ನು ಮೆಚ್ಚಿಸಬೇಕೆಂದು ಓಡಾಡತೊಡಗಿದ್ದರು. ದೊಡ್ಡಪ್ಪನನ್ನು ವಿಷ ಹಾಕಿ ಕೊಲ್ಲುತ್ತೇನೆಂದು ಹೇಳುತ್ತಿದ್ದ ಮುದುಕಿ ಈಗ ಪ್ಲೇಟ್ ಬದಲಿಸಿ ಅಪ್ಪನಷ್ಟು ಕೆಟ್ಟವರು ಜಗತ್ತಿನಲ್ಲಿ ಯಾರೂ ಇಲ್ಲ ಎಂದು ಹೇಳತೊಡಗಿದ್ದಾಳಂತೆ. ತೇರದಾಳಕ್ಕೆ ತಿಂಗಳಿಗೊಮ್ಮೆಯಾದರೂ ಬಂದುಹೋಗಬೇಕೆಂದು ಪಟ್ಟು ಹಿಡಿದ್ದಿದ್ದಾಳಂತೆ. ಊರಲ್ಲಿ ಈಗ ಅದೇ ಮಾತಾಗಿತ್ತು. ನಾವು ಆ ಕಡೆ ಹೋಗಲಿಲ್ಲ. ಅವ್ವ ಕೂಡ ಗಟ್ಟಿಮನಸ್ಸು ಮಾಡಿ ಎಂದಿನಂತೆ ತನ್ನ ಕೆಲಸದಲ್ಲಿ ತೊಡಗಿದಳು. ಒಂದು ಮುಂಜಾನೆ ನಾನು, ಅಕ್ಕ ಮತ್ತು ಅವ್ವ ಚಹಾ ಕುಡಿಯುತ್ತಿದ್ದೆವು. ಹೊರಗೆ ಅಂಗಳದಲ್ಲಿ ಆಡುತ್ತಿದ್ದ ಪಲ್ಲವಿ ಓಡೋಡುತ್ತ ಅಡುಗೆಮನೆಗೆ ಬಂದು 'ಮಾಮಾ, ಬಾ ಇಲ್ಲಿ, ನೋಡು. ಪಾಂಡುರಾಜ ಕುಂತಿ ಕಡೆ ಬರಲಿಕ್ಕೆ ಹತ್ಯಾನ...' ಅವ್ವ ಮತ್ತು ಅಕ್ಕನಿಗೆ ಅವಳ ಮಾತಿನ ತಲೆಬುಡ ತಿಳಿಯದೆ ಗೊಂದಲಕ್ಕೊಳಗಾದರು. ನನಗೆ ಮಾತ್ರ ಪಲ್ಲವಿಯ ಮಾತಿನ ಅರ್ಥ ಹೊಳೆಯತೊಡಗಿತ್ತು. ಅವಳ ಮಾತಿಗೆ ಆ ಸಂದರ್ಭದಲ್ಲಿ ನಗಬೇಕೋ, ವಿಷಾದಪಡಬೇಕೋ ನನಗೆ ತಿಳಿಯಲಿಲ್ಲ. ನಾವೆಲ್ಲರೂ ಹೊರಗೆ ಬಂದು ನೋಡಿದೆವು. ಅಪ್ಪ ತಿರುಗಿ ಮನೆಗೆ ಬರುತ್ತಿದ್ದ. ■

